

# ರಕ್ಷಿತ್ ಲೆಕ್ಕಾಚಾರದಲ್ಲಿ 'ಪ್ಯಾನ್ ಇಂಡಿಯಾ...'

'ಪ್ಯಾನ್ ಇಂಡಿಯಾ' ಹಣೆಪಟ್ಟಿ ಹೊತ್ತ ಸಿನಿಮಾಗಳ ಅಬ್ಬರದ ನಡುವೆಯೂ ಕನ್ನಡ ಸಿನಿಮಾರಂಗ ಎದುರಿಸುತ್ತಿರುವ ಸವಾಲೇನೂ ಕಮ್ಮಿಯಿಲ್ಲ. ದೊಡ್ಡ ಬಜೆಟ್‌ನ, ಸ್ಟಾರ್ ನಟರ ಸಿನಿಮಾಗಳಿಗೂ ಥಿಯೇಟರ್‌ಗೆ ಬರಲು ಜನ ಬಯಸುತ್ತಿಲ್ಲ. ಇಂಥ ಸಮಯದಲ್ಲಿ, ಉತ್ತಮ ಕಂಟೆಂಟ್ ಇರುವ ಸಿನಿಮಾಗಳನ್ನು ನೀಡುವುದಷ್ಟೇ ಇರುವ ಏಕೈಕ ದಾರಿ ಎಂದಿದ್ದಾರೆ ನಟ ರಕ್ಷಿತ್ ಶೆಟ್ಟಿ.

ಒಬ್ಬ ನಟನಾಗಿ, ನಿರ್ದೇಶಕನಾಗಿ, ಹಾಗೇ ನಿರ್ಮಾಪಕನಾಗಿ ತಾವು ಗುರುತಿಸಿರುವ ಕಾರಣಗಳನ್ನೂ ಬಿಡಿಸಿಟ್ಟಿದ್ದಾರೆ.

'ಕನ್ನಡ ಸಿನಿಮಾರಂಗದಲ್ಲಿ ಒಳ್ಳೆಯ ತಂತ್ರಜ್ಞರಿದ್ದಾರೆ. ಒಂದು ಸಿನಿಮಾವನ್ನು ಗಟ್ಟಿಗೊಳಿಸುವಲ್ಲಿ ಅವರ ಪರಿಶ್ರಮ ತುಂಬಾ ಇದೆ. ಸಿನಿಮಾ ಸೋಲು ತಾಂತ್ರಿಕ ವಿಷಯ ಮಾತ್ರವಾಗಿಲ್ಲ. ಎಲ್ಲಾ ಹಿನ್ನೆಲೆಯಲ್ಲಿ ನೋಡಿದಾಗ, ಸದ್ಯ ಜನರನ್ನು ಸೆಳೆಯುವ ಒಂದೇ ವಿಧಾನ ಎಂದರೆ, ಉತ್ತಮ ಬರಹ ನೀಡುವುದು' ಎಂದಿದ್ದಾರೆ.

'ಹೊಸ ಸಿನಿಮಾ ಬರುತ್ತಿದ್ದರೆ ಅದರ ಬಜೆಟ್ ಇಟ್ಟುಕೊಂಡು ಪ್ರಚಾರ ಅಥವಾ ಮಾತುಕತೆಗಳು ಕೇಳಿಬರುತ್ತವೆ. 'ಇಷ್ಟು ಬಜೆಟ್ ಸಿನಿಮಾ' ಎಂದು ಹೇಳಿಕೊಳ್ಳುತ್ತಾರೆ. ಆದರೆ ಸಿನಿಮಾದಲ್ಲಿ ಬಜೆಟ್ ವಿಷಯವಾಗಲೇಬಾರದು. ಸ್ಕ್ರಿಪ್ಟ್ ಹಾಗೂ ಸಿನಿಮಾ ಏನನ್ನು ಬಯಸುತ್ತದೆ ಎಂಬುದರ ಮೇಲೆ ಸಿನಿಮಾ ಕಟ್ಟಬೇಕು. ನಾವು ಮೂರು ಕೋಟಿಯಲ್ಲಿ 'ಕಿರಿಕ್ ಪಾರ್ಟಿ' ಸಿನಿಮಾ ಮಾಡಿದೆವು. ಅದು ದೊಡ್ಡ ಹಿಟ್ ಆಯಿತು. ಟ್ರೆಂಡ್ ಅನ್ನುವ ಒಂದೇ ಕಾರಣಕ್ಕೆ ಎಲ್ಲಾ ಸಿನಿಮಾವನ್ನೂ ದೊಡ್ಡ ಬಜೆಟ್ ಸಿನಿಮಾ ಮಾಡುವ ಅವಶ್ಯಕತೆ ಇಲ್ಲ. ಇದು ಪ್ಯಾನ್ ಇಂಡಿಯಾ ಸಿನಿಮಾ ಸಂಸ್ಕೃತಿಗೂ ಅನ್ವಯಿಸುತ್ತದೆ' ಎಂದು ವಿವರಣೆ ನೀಡಿದ್ದಾರೆ.

ಪ್ಯಾನ್ ಇಂಡಿಯಾ ಸಿನಿಮಾಗಳ ಕುರಿತು ಮಾತು ಮುಂದುವರೆಸುತ್ತಾ, 'ಸಿನಿಮಾವನ್ನು ಇಡೀ ದೇಶಕ್ಕೆ ಕೊಂಡೊಯ್ಯಬೇಕು. ಯಾವಾಗ ಎಂದರೆ, ಸಿನಿಮಾ ವಿಷಯ ಎಲ್ಲ ಭಾಗದ ಜನರಿಗೂ ಸಂಬಂಧಿಸಿದ್ದಾಗ. ಇಲ್ಲದಿದ್ದರೆ ಪ್ಯಾನ್ ಇಂಡಿಯಾ ಎನ್ನುವುದಕ್ಕೆ ಅರ್ಥ ಇರುವುದಿಲ್ಲ. ಸಿನಿಮಾ ಪ್ರಾದೇಶಿಕವಾಗಿ ಉತ್ತಮ ಎನಿಸಿಕೊಂಡರೆ, ಜನ ಸಬ್‌ಟೈಟಲ್‌ನೊಂದಿಗೂ ನೋಡುತ್ತಾರೆ' ಎಂದಿದ್ದಾರೆ.

'ಒಳ್ಳೆಯ ಸಿನಿಮಾಗಳನ್ನು ನಾವು ನಿರಂತರವಾಗಿ ಜನರಿಗೆ ನೀಡುತ್ತಿಲ್ಲ. ಹೀಗಾಗಿ ಅವರಿಗೆ ಥಿಯೇಟರ್‌ಗಳಿಗೆ ಬರುವ ಅಭ್ಯಾಸ ಕಡಿಮೆಯಾಗಿದೆ. ನಾವು ಉತ್ತಮ ಸಿನಿಮಾಗಳನ್ನು ನೀಡುತ್ತಿದ್ದರೆ, ಬಂದೇ ಬರುತ್ತಾರೆ. ಸ್ಕ್ರಿಪ್ಟ್ ಚೆನ್ನಾಗಿದ್ದರಷ್ಟೆ ಸಿನಿಮಾ ಗೆಲ್ಲುತ್ತದೆ. ಇಲ್ಲದಿದ್ದರೆ ನಿರ್ದೇಶಕನ ಜನಪ್ರಿಯತೆಯಾಚೆಗೂ ಏನೂ ಸಾಧ್ಯವಿಲ್ಲ' ಎಂದು ಅಭಿಪ್ರಾಯಪಟ್ಟಿದ್ದಾರೆ. ■



# ದಿಟ್ಟ ಯುವತಿ ಅಕ್ಷತಾ

'ಕೋಳಿ ಎಸ್ರು', 'ಪಿಂಕಿ ಎಲ್ಲಿ?' ಮುಂತಾದ ಸದಭಿರುಚಿಯ ಚಿತ್ರಗಳಲ್ಲಿನ ಅಭಿನಯದ ಮೂಲಕ ಸಿನಿಪ್ರಿಯರ ಮೆಚ್ಚುಗೆ ಗಳಿಸಿರುವ ನಟಿ ಅಕ್ಷತಾ ಪಾಂಡವಪುರ, ಇದೀಗ 'ಕೌಮುದಿ' ಸಿನಿಮಾದಲ್ಲಿ ನಟಿಸುತ್ತಿದ್ದಾರೆ.

ಅಕ್ಷತಾ ಮುಖ್ಯಭೂಮಿಕೆಯಲ್ಲಿರುವ 'ಕೌಮುದಿ' ಚಿತ್ರ ಈಚೆಗಷ್ಟೇ ಸೆಟ್ಟೇರಿದ್ದು, 'ಕಂದೀಲು' ಎಂಬ ಪ್ರಯೋಗಶೀಲ ಸಿನಿಮಾ ನಿರ್ದೇಶಿಸಿದ್ದ ಯಶೋದಾ ಪ್ರಕಾಶ್ ಅವರೇ ಈ ಚಿತ್ರವನ್ನು ನಿರ್ದೇಶಿಸುತ್ತಿದ್ದಾರೆ. ಕಂದೀಲು ಸಿನಿಮಾ ಕೂಡ ಬಿಡುಗಡೆಯ ಹಾದಿಯಲ್ಲಿದ್ದು, ಯಶೋದಾ ಅವರಿಗೆ ಇದು ಮೂರನೇ ಚಿತ್ರ.

ನಾಗೇಶ್ ಎನ್. ಅವರ ಕಥೆಯನ್ನಾಧರಿಸಿ ಈ ಸಿನಿಮಾ ಸಿದ್ಧಗೊಳ್ಳುತ್ತಿದೆ. 'ಬ್ಲೈಂಡ್ ಬಿಲೀಫ್" ಎಂಬ ಅಡಿಬರಹವೂ ಚಿತ್ರಕ್ಕಿದ್ದು, ಈ ಸಿನಿಮಾ ಸಾಮಾಜಿಕ ಸಂದೇಶವೊಂದನ್ನು ದಾಟಿಸುವ ಸೂಚನೆ ಸಿಕ್ಕಿದೆ.

ಈ ಬಗ್ಗೆ ನಿರ್ದೇಶಕಿ ಯಶೋದಾ ಅವರು ಇನ್ನಷ್ಟು ವಿವರಣೆ ನೀಡಿದ್ದಾರೆ. 'ಶಿಕ್ಷಣ ಹಾಗೂ ವೈಜ್ಞಾನಿಕ ಜ್ಞಾನದ ಕೊರತೆಯಿಂದಾಗಿ ಮೂಲನಂಬಿಕೆ, ಮೂಢನಂಬಿಕೆಯ ವ್ಯತ್ಯಾಸ ತಿಳಿಯದೆ ಬದುಕಿಗೆ ಅಪಾಯ ತಂದೊಡ್ಡುವ ಸಂಪ್ರದಾಯ, ಆಚರಣೆಗಳ ಸತ್ಯ–ವಾಸ್ತವಗಳ ಸುತ್ತ ಈ ಸಿನಿಮಾ ಬೆಳಕು ಚೆಲ್ಲಲಿದೆ. ಈಗಲೂ ಗ್ರಾಮೀಣ ಭಾಗದಲ್ಲಿ ಇಂತಹ ಪದ್ಧತಿಗಳನ್ನು ಅನುಸರಿಸುತ್ತಿದ್ದಾರೆ. ಕಥಾನಾಯಕಿ ಇದರ ವಿರುದ್ಧ ದನಿ ಎತ್ತಿ, ಯಾವ ರೀತಿ ಹೋರಾಟ ಮಾಡುತ್ತಾಳೆ ಎಂಬುದನ್ನು ಅರ್ಥಪೂರ್ಣ ಸನ್ನಿವೇಶಗಳ ಮೂಲಕ ತೋರಿಸುವ ಪ್ರಯತ್ನ ಸಿನಿಮಾದ ವಸ್ತು' ಎಂದಿದ್ದಾರೆ.

ಕುಮಾರಿ ದೀಪಿಕಾ, ಪ್ರತೀಕ, ಅಂಕಿತಾಮೂರ್ತಿ, ನೀನಾಸಂ ನಟರಾಜ್ ಮುಂತಾದವರು ತಾರಾಬಳಗದಲ್ಲಿದ್ದಾರೆ. ಶ್ರೀಸುರೇಶ್ ಸಂಗೀತ, ಪಿ.ವಿ.ಆರ್. ಸ್ವಾಮಿ ಗೂಗಾರೆದೊಡ್ಡಿ ಛಾಯಾಚಿತ್ರಗ್ರಹಣ ಚಿತ್ರಕ್ಕಿದೆ. ■